ಈ ಸ್ಟೇಷನ್ನಿಗೆ ರಿಪೋರ್ಟ್ ಆದ ಮೇಲೆ ಮಾಯಣ್ಣನಿಗೆ ಮೊದಲ ರಿಯಲ್ ಚಾಲೆಂಜ್ ಎದುರಾಗಿತ್ತು.

ಪೇದೆ ವಿನಯ್‌ನಿಂದ, ಚೇತನಾ ಲೇಔಟ್‌ನಲ್ಲಿ ನಡೆದ ಕೊಲೆ ಸುದ್ದಿ ಬಂದ ತಕ್ಷಣ, ಅವನಿಗೆ ಸೂಚನೆಗಳನ್ನು ಕೊಡುತ್ತಾ, ವಿವರಗಳನ್ನು ವಿಚಾರಿಸುತ್ತಾ, ಪೇದೆ ಭುಜಂಗನೊಡನೆ, ಜೀಪನ್ನೇರಿ ಮರ್ಡರ್ ಸ್ಪಾಟ್ ಕಡೆ ಹೊರಟಿದ್ದ ಮಾಯಣ್ಣ. ಸದ್ಯಕ್ಕೆ ಕೊಲೆ ನಡೆದ ಜಾಗದಲ್ಲಿ ಸಾಕ್ಷಿಗಳು ನಾಶವಾಗದಂತೆ ಕಾಯುವುದು ಒಂದು ದೊಡ್ಡ ಸವಾಲಾಗಿತ್ತು. ಪರಿಸ್ಥಿತಿ ನಿಭಾಯಿಸಲು ಇನ್ನೂ ಮೂವರು ಪೇದೆಗಳನ್ನು ತಕ್ಷಣ ಅಲ್ಲಿಗೆ ರವಾನಿಸಿದ್ದ ಮಾಯಣ್ಣ. ಜಗ ಜನನಿ ನಗರ ಸ್ಟೇಷನ್ನಿಗೆ ಮೂರು ವಾರಗಳ ಹಿಂದಷ್ಟೇ ವರ್ಗವಾಗಿ ಬಂದಿದ್ದ ಯುವ ಸಬ್ ಇನ್ಸ್‌ಪೆಕ್ಟರ್ ಮಾಯಣ್ಣನಿಗೆ ಕೊಲೆ ತನಿಖೆ ಕೇಸುಗಳು ಹೊಸದೇನಲ್ಲ. ನಿಖರವಾಗಿ ಹೇಳಬೇಕೆಂದರೆ, ಇದು ಏಳನೆಯದು. ಆದರೂ ಬೆಳ್ಳಂಬೆಳಗ್ಗೆ ವಿನಯ್‌ನಿಂದ ಬಂದ ಕೊಲೆ ಸುದ್ದಿ ಮಾಯಣ್ಣನಿಗಷ್ಟೇ ಅಲ್ಲ, ಇಡೀ ಸ್ಟೇಷನ್ನಿನಲ್ಲಿ ಒಂದು ವಿಶೇಷ ಸಂಚಲನ ಸೃಷ್ಟಿಮಾಡಿತ್ತು. ಅದಕ್ಕೆ ಒಂದು ವಿಶೇಷ ಕಾರಣವೂ ಇತ್ತು. ಕೊಲೆಯಾಗಿದ್ದು ಸಾಮಾನ್ಯ ವ್ಯಕ್ತಿಯಲ್ಲ, ಓರ್ವ ಸೆಲೆಬ್ರಿಟಿ. ಇಡೀ ರಾಜ್ಯವೇ ಗುರುತಿಸಬಲ್ಲ ಯುವತಿ. ಅತ್ಯಂತ ಜನಪ್ರಿಯ ಟೀವಿ ಧಾರಾವಾಹಿ ‘ಅಗ್ನಿಜಾಲ’ದಲ್ಲಿನ ನಾಯಕಿ ಪಾತ್ರಧಾರಿ ಅಮೃತಾ ಮುತ್ತಣ್ಣ– ಎಲ್ಲರೂ ಕರೆಯುವಂತೆ ಅಮ್ಮು– ಒಂದು ಅಪ್ಪಟ, ಅಸಲಿ ಪ್ರತಿಭೆ.

ಅಷ್ಟೊತ್ತಿಗೆ ವಿನಯ್‌ನಿಂದ ಕರೆ ಬಂದಿತ್ತು.

‘ಸಾರ್, ಆಗಲೇ ನ್ಯೂಸ್ ಹರಡಿದ ಹಾಗೆ ಕಾಣುತ್ತೆ. ನಿಧಾನವಾಗಿ ಜನರು, ಮೀಡಿಯಾದವರು, ಟೀವಿ ಫೀಲ್ಡ್‌ನವರು ಸುತ್ತುಕೊಳ್ತಾಯಿದ್ದಾರೆ’.

‘ನೊ ವರೀಸ್, ಐದು ನಿಮಿಷದಲ್ಲಿ ಇನ್ನೂ ಮೂರು ಪೀಸಿಗಳು ಅಲ್ಲಿರ್ತಾರೆ. ಬಟ್ ವಿನಯ್, ಯಾವುದೇ ಕಾರಣಕ್ಕೂ ಯಾರೂ ಕ್ರೈಮ್ ಸೈಟ್ ಲಿಮಿಟ್ಸ್ ದಾಟಬಾರದು. ಅಗತ್ಯ ಅನ್ನುದ್ರೆ ಲಾಠಿ ಬೀಸಿ. ನಾನು ಇನ್ನತ್ತು ನಿಮಿಷದಲ್ಲಿ ಅಲ್ಲಿರ್ತೀನಿ’.

‘ಯೆಸ್ ಸಾರ್’.

‘ವಿನಯ್, ಬೈ ದಿ ವೇ... ಟೆಲ್ ಮೀ ಸಮ್ ಥಿಂಗ್ ಅಬೌಟ್ ದಿಸ್ ಲೇಡಿ ಅಮ್ಮು’.

‘ಪ್ರೈಮ್ ಟೈಮಲ್ಲಿ ನಂಬರ್ ಒನ್ ಟಿಆರ್‌ಪಿ ಇರುವ ಟಾಪ್ ಟೀವಿ ಸೀರಿಯಲ್ ‘ಅಗ್ನಿಜಾಲ’ದಲ್ಲಿನ ಮೈನ್ ಕ್ಯಾರೆಕ್ಟರ್ ಇವರೇ ಸಾರ್. ಹೈಲಿ ಟ್ಯಾಲೆಂಟೆಡ್ ಕಲಾವಿದೆ. ಆಗಲೇ ಒಂದು ಸಿನಿಮಾಗೂ ಸೈನ್ ಮಾಡಿದ್ದಾರೆ ಅನ್ನೋ ಸುದ್ದಿ ಇದೆ. ಇವರು ಬಾಡಿಗೆಗೆ ಇರೋ ಫಸ್ಟ್ ಫ್ಲೋರ್ ಮನೆ ಕೆಳಗೆ ಗ್ರೌಂಡ್ ಫ್ಲೋರಲ್ಲೇ, ಮನೆ ಓನರ್ಸ್ ವಾಸ ಇರೋದು. ಓನರ್ಸ್ ಗಂಡ–ಹೆಂಡತಿ ಅಷ್ಟೇ. ಸೀನಿಯರ್ ಸಿಟಿಜನ್ಸ್. ಅವರು ಹೇಳೋ ರೀತೀಲಿ ಅಮ್ಮು ಅವರ ವಯಸ್ಸು ಇಪ್ಪತ್ತೈದು. ಕೊಡಗಿನವರು. ವಿದ್ಯಾವಂತೆ, ಎಂಬಿಎ ಗೋಲ್ಡ್ ಮೆಡಲಿಸ್ಟ್, ಇನ್ನೂ ಮದುವೆ ಆಗಿಲ್ಲ, ಒಬ್ಬಳೇ ಮಗಳು. ಇವರ ಮಲತಾಯಿ ಮತ್ತು ಆಕೆಯ ಇಬ್ಬರು ಮಕ್ಕಳು ಮಡಿಕೇರಿಯಲ್ಲಿ, ಇವರ ಎಸ್ಟೇಟ್ ಮನೆಯಲ್ಲಿಯೇ ಇದ್ದಾರೆ. ಮಡಿಕೇರಿಯಲ್ಲಿ ಇರೋ ಕಾಫಿ ಎಸ್ಟೇಟ್, ಮನೆ, ಎಲ್ಲವೂ ತೀರಿಕೊಂಡಿರೊ ಅಮ್ಮು ಅವರ ಸ್ವಂತ ತಾಯಿಯ ಮೂಲಕ, ಅಮ್ಮು ಅವರಿಗೆ ಬಂದಿರೋದು. ಈಕೆಗೆ ಆಕ್ಟಿಂಗ್ ಹವ್ಯಾಸ ಅಷ್ಟೇ ಅಲ್ಲ, ಒಂದು ಕಡು ವ್ಯಾಮೋಹ. ಅದನ್ನು ಬೆನ್ನತ್ತಿ ವರ್ಷದ ಹಿಂದೆ ಬೆಂಗಳೂರಿಗೆ ಬಂದು ಇಲ್ಲಿ ಒಬ್ಬರೇ ವಾಸವಾಗಿದ್ದರು. ಸೋ ಶಿ ಈಸ್ ಎ ರಿಚ್ ಕಾಫಿ ಪ್ಲಾಂಟರ್. ಮಡಿಕೇರಿಯಲ್ಲಿ ಎಂಬತ್ತು ಎಕರೆ ಕಾಫಿ ತೋಟ, ಓಲ್ಡ್ ಇಂಗ್ಲಿಷ್ ಟೈಪ್ ಬಂಗ್ಲೊ ಎಲ್ಲದರ ಏಕೈಕ ಒಡತಿ. ಇಷ್ಟು ವಿಚಾರ್ಸಿದ್ದೀನಿ ಸಾರ್’.

‘ಇನ್ನೇನಾದ್ರು ಇದೆಯಾ ವಿನಯ್?’

‘ನನ್ನ ವೈಫ್ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಅಮ್ಮು ಅವರನ್ನ ಫಾಲೋ ಮಾಡ್ತಾರೆ. ಅವರ ಅಭಿಮಾನಿ ಅಂತಾನೂ ಇರಬಹುದು ಸಾರ್’.

‘ಏನ್ ಹೇಳ್ತಾರೆ ಅಮ್ಮು ಬಗ್ಗೆ?’

‘ಅಮ್ಮು ಅವರು ಸೋಷಿಯಲ್ ಮೀಡಿಯಾದಲ್ಲಿ ತುಂಬಾನೆ ಆಕ್ಟಿವ್. ಅವರ ಎಸ್ಟೇಟ್ ಕಾರ್ಮಿಕರ ಮಕ್ಕಳಿಗೆ ಓದೋದಕ್ಕೆ ಎಲ್ಲಾ ತರ ಸೌಲಭ್ಯ, ಸೌಕರ್ಯ ಮಾಡಿಕೊಟ್ಟಿದ್ದಾರಂತೆ. ಸಾಮಾಜಿಕ ವಿಷಯಗಳ ಬಗ್ಗೇನೂ ಪೋಸ್ಟ್ ಮಾಡ್ತಾ ಇರ್ತಾರೆ. ಬಡವರ ಬಗ್ಗೆ ಬಹಳ ಅನುಕಂಪ. ಕೆಲವು ಸಾರಿ ಅನಿಸಿದ್ದು ಹಾಗೇ ಹೇಳಿ, ವಿವಾದಗಳನ್ನೂ ಮೈಮೇಲೆ ಎಳ್ಕೊಳ್ತಾ ಇರ್ತಾರೆ. ಆಮೇಲೆ ಬೇರೆಯವರಿಗಿಂತ ಸ್ವಲ್ಪ ಭಿನ್ನ ಅಂತಿರ್ತಾರೆ ಸಾರ್’.

‘ಅವರ ಮನೆ ಕಡೆಯವರು ಊರಲ್ಲಿ ಯಾರಿದ್ದಾರೆ ವಿಚಾರಿಸಿದ್ದೀರ? ಅವರ ತಂದೆ, ತಾಯಿ ಕಡೆ ನೆಂಟ್ರು ಯಾರಾದ್ರೂ?’

‘ಅಪ್ಪ ಅಮ್ಮ ಇಬ್ಬರೂ ಇಲ್ಲ ಸಾರ್. ಅಮ್ಮು ಅವರ ತಂದೆ ಮುತ್ತಣ್ಣ, ಕಳೆದ ವರ್ಷವಷ್ಟೇ ತೀರ್ಕೊಂಡ್ರಂತೆ. ರಿಟೈರ್ಡ್ ಆರ್ಮಿ ಕ್ಯಾಪ್ಟನ್. ಇನ್ನು ತಾಯಿ ಲೀಲಾ ಮುತ್ತಣ್ಣ, ಅಮೃತಾ ಶಾಲೆಗೆ ಸೇರುವ ವಯಸ್ಸಿಗೇ, ಹೃದ್ರೋಗದಿಂದ ತೀರಿಕೊಂಡಿದ್ದರು. ಅದಕ್ಕೆ ಮುಂಚೆ ಅವರು ತಮ್ಮ ತವರು ಮನೆಯಿಂದ ಬಂದ ಎಲ್ಲಾ ಆಸ್ತಿಯನ್ನು ಅಮೃತಾಳ ಹೆಸರಿಗೇ ಬರೆದಿದ್ರಂತೆ ಸಾರ್. ಆಮೇಲೆ ಕ್ಯಾಪ್ಟನ್ ಮುತ್ತಣ್ಣ ಮತ್ತೆ ಮದುವೆ ಆದ್ರು. ಎರಡನೇ ಮದುವೆಯಿಂದ ಇಬ್ಬರು ಮಕ್ಕಳಿದ್ದಾರೆ– ಒಂದು ಗಂಡು ಒಂದು ಹೆಣ್ಣು. ಇನ್ನು ಅದು ಬಿಟ್ಟರೆ ಬೇರೆ ಯಾವ ನೆಂಟ್ರು ಅಂತ ಏನೂ ಇದ್ದಂತಿಲ್ಲ ಸಾರ್’.

‘ಅಮ್ಮು ಅವರ ಮಲತಾಯಿ ಅಂದ್ರಲ್ಲ, ಅವರಿಗೆ ಸುದ್ದಿ ಕೊಟ್ಟಿದ್ದೀರಾ?’

‘ಬಾಡಿ ಐಡೆಂಟಿಟಿ ಕನ್‌ಫರ್ಮ್ ಆದ ತಕ್ಷಣ ಸುದ್ದಿ ಕಳ್ಸಿದ್ದೀವಿ. ಅವರೂ ಜೊತೆಗೆ ಎಸ್ಟೇಟ್ ಮ್ಯಾನೇಜರ್ ಮಧ್ಯಾಹ್ನ ಮೂರು ಅಥವಾ ನಾಲ್ಕು ಗಂಟೆಗೆ ಇಲ್ಲಿರ್ತಾರೆ ಸಾರ್’.

‘ಎಸ್ಟೇಟ್ ಮ್ಯಾನೇಜರ್ ಅಂದ್ರಲ್ಲಾ, ಅದು ಯಾರು?’

‘ಚಂದ್ರನ್ ನಾಯರ್ ಅಂತ ಸಾರ್. ಕ್ಯಾಪ್ಟನ್ ಸರ್ವೀಸ್‌ನಲ್ಲಿದ್ದಾಗ ಅದೇ ಯುನಿಟ್‌ನಲ್ಲಿ ಸಿಪಾಯಿ ಆಗಿದ್ರಂತೆ. ಕಾಶ್ಮೀರದಲ್ಲಿ ಒಂದು ಟೆರರಿಸ್ಟ್ ಹೈಡೌಟ್ ಬಸ್ಟಿಂಗ್ ಆ್ಯಕ್ಷನ್‌ನಲ್ಲಿ ಚಂದ್ರನ್ ಒಂದು ಟೈಟ್ ಸ್ಪಾಟ್‌ನಲ್ಲಿ ಟ್ರ್ಯಾಪ್ ಆಗಿದ್ದಾಗ, ಗುಂಡಿನ ಸುರಿಮಳೆಯನ್ನೂ ಲೆಕ್ಕಿಸದೆ ವಾಪಸ್ ಫೈರ್ ಮಾಡುತ್ತಾ, ಕ್ಯಾಪ್ಟನ್ ಮುತ್ತಣ್ಣಾ ಅವರು ನುಗ್ಗಿ ಈತನ್ನ ಸುರಕ್ಷಿತವಾಗಿ ಎಳ್ಕೊಂಡ್ ಬಂದ್ರಂತೆ ಸಾರ್’.

‘ಇಷ್ಟೆಲ್ಲಾ ವಿವರಗಳು ಹೇಗ್ರೀ?’

‘ಅದೇ ಈ ಅಮ್ಮು ಅವರ ಇನ್‌ಫರ್ಮೇಷನ್ ಕೊಡೋಕೆ ಚಂದ್ರನ್‌ಗೆ ಫೋನ್ ಮಾಡಿದ್ನಲ್ಲಾ ಸಾರ್. ಆತ ತುಂಬಾ ಅಪ್ಸೆಟ್ ಆದಂಗಿತ್ತು. ಎಲ್ಲಾ ಜ್ಞಾಪಕ ಮಾಡ್ಕೊಂಡು, ನಾನು ಈಗ ಬದುಕಿದ್ರೆ ಅದುಕ್ಕೆ ಕ್ಯಾಪ್ಟನ್ನೇ ಕಾರಣ ಅಂತಿದ್ರು ಸಾರ್. ಆಮೇಲೆ ಆರ್ಮಿಯಿಂದ ರಿಟೈರ್ ಆದ ಮೇಲೆ ಇವರ ಎಸ್ಟೇಟ್‌ನಲ್ಲೇ ಮ್ಯಾನೇಜರ್ ಆಗಿ ಸೇರ್ಕೊಂಡ್ರಂತೆ ಸಾರ್’.

‘ಸರಿ ವಿನಯ್. ಅಲ್ಲಿ ಎಲ್ಲಾ ಸರಿಯಾಗಿ ಹ್ಯಾಂಡಲ್ ಮಾಡಿ. ನಾನು ಹೇಳಿದ್ದೆಲ್ಲಾ ನೆನಪಿರಲಿ. ಡೋಂಟ್ ಬೌಚಪ್ ಎನಿಥಿಂಗ್’.

‘ಯೆಸ್ ಸಾರ್. ಹಾಗೇ ಅಮ್ಮು ಅವರ ನಾಲ್ಕೈದು ಫೋಟೊ ವಾಟ್ಸಾಪ್‌ನಲ್ಲಿ ಕಳುಸ್ತೀನಿ, ನೋಡಿ ಸಾರ್’.

‘ಓಕೆ ಡೂ ದಟ್’.

ಅಮ್ಮು ಸಾಧಾರಣ ಎತ್ತರದ, ತಿದ್ದಿ ತೀಡಿದಂಥ ತಿಳಿಗೆಂಪು ಮುಖದ, ಶುದ್ಧ ತ್ವಚೆಯ, ಮುಗ್ಧ ನಗುವಿನ, ಮುತುವರ್ಜಿಯಿಂದ ಕಾಪಾಡಿಕೊಂಡ ಆಕಾರದ, ಸೋಗಿಲ್ಲದ ಸಹಜ ಸುಂದರಿ ಎನ್ನಬಹುದೇನೊ. ಎ ಟಿಪಿಕಲ್ ಕೂರ್ಗಿ ಬ್ಯೂಟಿ. ವಿನಯ್ ಕಳುಹಿಸಿದ ಫೋಟೊ ಭುಜಂಗನಿಗೆ ತೋರಿಸುತ್ತಾ,

‘ನೀವೇನಾದ್ರು ಹೇಳ್ತೀರ ಭುಜಂಗ, ಈ ಆ್ಯಕ್ಟ್ರೆಸ್ ಬಗ್ಗೆ?’

‘ನೀವು ನೋಡ್ಬೇಕು ಸಾರ್ ಆ ‘ಅಗ್ನಿಜಾಲ’ ಸೀರಿಯಲ್. ಅಮ್ಮುರವರದು ಬಾಳಾನೇ ನ್ಯಾಚುರಲ್ ಆ್ಯಕ್ಟಿಂಗ್ ಸಾರ್. ಈ ಬೇರೆ ಕ್ಯಾರೆಕ್ಟರ್‌ಗಳಿರ್ತಾವಲ್ಲ, ಯಾವಾಗ್ಲೂ ಜರಿ ಸೀರೆ ಉಟ್ಕೊಂಡು, ಮುಖಕ್ಕೆ ಒಂದಿಂಚು ಕಲರ್ ಪೈಂಟ್ ಒಡ್ಕೊಂಡು, ಒಂದ್ಮಣ ಒಡವೆ ಹೇರ್ಕೊಂಡು, ಇಷ್ಟಿಷ್ಟ್ ದಪ್ಪ ಕಣ್ಣು ಬಿಟ್ಕೊಂಡು, ಆ್ಯಕ್ಟಿಂಗ್ ಎಂತಾದು ಇಲ್ಲ, ಬರೀ ಮಾತು ಮಾತು ಮಾತು. ಅಂಗಲ್ಲ ಸಾರ್ ಇವ್ರು. ಬಾಳ ಡಿಫರೆಂಟ್ ಟೈಪ್ ಆ್ಯಕ್ಟಿಂಗ್ ಸಾರ್’.

‘ಹೌದೇನ್ರೀ?’

‘ಹೌದು ಸಾರ್, ಈ ಸೀರಿಯಲ್ ನೋಡ್ಕೊಂಡು ದಿನಾ ನನ್ ವೈಫ್ ಅಳೋದೇ ಆಗೋಯ್ತು ಸಾರ್. ನಾನೂ ಒಂದೊಂದ್ಸಾರಿ ಅತ್ಬಿಡ್ತೀನಿ ಸಾರ್’.

‘ಅಂತದೇನ್ರಿ ಅದರಲ್ಲಿ?’

‘ಈ ಅಮ್ಮು ಕ್ಯಾರೆಕ್ಟರ್, ತುಂಬಾ ಶ್ರೀಮಂತರ ಮಗಳು ಸಾರ್. ಇನ್ನೊಬ್ರು ಸಾವ್ಕಾರ್ರು ಮನೆಗೆ ಸೊಸೆ ಆಗಿ ಹೋಗೋದು ಅಂತ ಮಾತುಕತೆ ಆಗಿರುತ್ತೆ. ಆದ್ರೆ ಪಾಪ ಅಮ್ಮು ಅವರ ಅಪ್ಪ, ವ್ಯವಹಾರದಲ್ಲಿ ಫುಲ್ ಲಾಸ್ ಆಗಿ ಸೂಸೈಡ್ ಮಾಡ್ಕೊಂಬುಡ್ತಾರೆ. ಸರಿ, ಆ ಕಡೇವ್ರು ಮಾತು